


# ಮರಣದೊಂದಿಗೆ ಒಂದು ಆಟ

ಹಾವಾಡಿಗನ್ನೊಬ್ಬನಿಗೆ ಒಂದು ಚಿಕ್ಕ ಹೆಬ್ಬಾವು ಸಿಕ್ಕಿತು ಅವನು ಅದನ್ನು ಬೆಳಸಿ ಬೀದಿ ಬೀದಿಗಳಲ್ಲಿ ಆಡಿಸುತ್ತಾ ಜೀವನ ಸಾಗಿಸುತ್ತಿದ್ದನು.

ಇವನು ತೋರಿಸುವ ಆಟವನ್ನು ಜನಗಳು ಕೂಡಿ ಬರುವಾಗ, ಅವನು ಆ ಹಾವನ್ನು ಪುಟ್ಟಿಯಿಂದ ಹೊರಗೆ ತೆಗೆದು ಅದು ತನ್ನ ಸಂಪೂರ್ಣವಾಗಿ ಸುತ್ತಿಕೊಳ್ಳುವಂತೆ ಆಜ್ಞೆ ಮಾಡುವನು. ಆಗ ಅದು ಅವನನ್ನು ಸುತ್ತಿಕೊಳ್ಳುತ್ತದೆ ಅವನು ಅದಕ್ಕೆ ಸಿಕ್ಕಿಕೊಂಡವನಂತೆ ನಟಿಸುವನು ಹಾವು ಕೂಡ ಅವನನ್ನು ಸುತ್ತಿ ಮುರಿಯುವಂತೆ ಮಾಡುತ್ತಿತ್ತು. ಆ ಸಂಧರ್ಭದಲ್ಲಿ ಅವನು "ಅಯ್ಯಾ ಈ ಹಾವು ನನ್ನನ್ನು ಸುತ್ತಿ ಮುರಿದು ಸಾಯಿಸುಂತೆ ಇದೆ ಯಾರಾದರು ನನ್ನನ್ನು ಕಾಪಾಡಿ" ಎಂದು ಜೋರಾಗಿ ಕೂಗಿಕೊಳ್ಳುವನು. ಜನಗಳು ಇವನ ನಟನೆಯನ್ನು ಬಹಳ ಆಶ್ಚರ್ಯದಿಂದ ನೋಡುವರು. ಸ್ವಲ್ಪ ಸಮಯದ ನಂತರ ಇವನು ಆ ಹಾವನ್ನು ತನ್ನನ್ನು ಬಿಟ್ಟು ಬಿಡುವಂತೆ ಆಜ್ಞೆಮಾಡುವನು ತಕ್ಷಣ ಆ ಹಾವು ಅವನನ್ನು ಬಿಟ್ಟು ಪುಟ್ಟಿಯ ಒಳಗೆ ಹೋಗಿ ಬಿಡುವದು.

ಇದನ್ನು ನೋಡಿದ ಮಕ್ಕಳು ಕೈತಟ್ಟುತ್ತಾ ಬಹಳವಾಗಿ ಅವನನ್ನು ಹೊಗಳುತ್ತಾ ಅನೇಕ ಕಾಸುಗಳನ್ನು ಅವನಿಗೆ ಎಸೆಯುವರು. ಅವನಿಗೆ ಹಾವಿನಿಂದ ಒಳ್ಳೇ ಆದಾಯ ಸಿಗುತ್ತಿತ್ತು.

ಕಾಲಾಂತರದಲ್ಲಿ ಆ ಹೆಬ್ಬಾವು ಮರಿಯು ಬೆಳೆಯುತ್ತಾ ಬಂದು. ಹೀಗೆ ಒಂದು ದಿನ ಅವನು ತನ್ನ ವಾಡಿಕೆಯ ಪ್ರಕಾರ ಅದಕ್ಕೆ ಆಜ್ಞೆಮಾಡಿ ಜನಗಳಿಗೆ ಆಟ ತೋರಿಸುತ್ತಿದ್ದನು. ಆಟದ ಕೊನೆಯಲ್ಲಿ ಅವನು ಆ ಹಾವನ್ನು ತನ್ನನ್ನು ಬಿಟ್ಟು ಬಿಡುವಂತೆ ಆಜ್ಞೆಮಾಡಿದನು. ಆದರೆ ಅದು ಬಿಡದೆ ಅವನನ್ನು ಗಟ್ಟಿಯಾಗಿ ಮುರಿಯಲು ಆರಂಭಿಸಿತು. ಇದನ್ನು ತಿಳಿದ ಅವನು. ಭಯಭ್ರಾಂತನಾಗಿ ಜನಗಳನ್ನು ಕೂಗಲು ಆರಂಭಿಸಿದನು. ತನ್ನನ್ನು ಯಾರಾದರು ಬಂದು ಬಿಡಿಸುವಂತೆ ಬೇಡಿದನು. ಆದರೆ ಜನಗಳು ಅವನ ನಟನೆ ಬಹಳ ವಿಶೇಷವಾಗಿದೆ. ಅಂದುಕೊಂಡು ಯಥಾ ಪ್ರಕಾರ ನೋಡಲು ಆರಂಭಿಸಿದರು. ಕೆಲವೆ ಕ್ಷಣದಲ್ಲಿ ಅವನ ಎಲುಬುಗಳು ಚಟಪಟ ಎಂದು ಮುರಿಯಲು ತೊಡಗಿದವು. ನಂತರ ಕೆಲಗೆ ಬಿದ್ದವನಾಗಿ ಜೀವಬಿಟನ್ನು. ಅದನ್ನು ಗಮನಿಸುತ್ತಿದ ಜನಗಳು ಹೆದರಿ ಬೆದರಿ ಹೋದರು.

ನನ್ನ ಪ್ರಿಯರೆ ಈ ಹಾವಿನಂತೆ ಪಾಪವು ಇದೆ. ಮೊಟ್ಟಮೊದಲು ಒಬ್ಬನು ಪಾಪವನ್ನು ಮಾಡುವಾಗ, ಹಾವಾಡಿಗನ ಆಜ್ಞೆಗೆ ಒಳಪಟ್ಟಂತೆಯೇ ಈ ಪಾಪವು ನಮ್ಮ ಒಂದು ಅಧಿಕಾರಕ್ಕೆ ಒಳಪಡುತ್ತದೆ. ನಾವು ಇಚ್ಛಿಸಿದರೆ ಪಾಪ ಮಾಡಬಹುದು ಇಷ್ಟವಿಲ್ಲದಿದ್ದರೆ ಮಾಡದೆಯೇ ಇರಬಹುದು. ಇದು ಸಾಧ್ಯವಾಗುತ್ತದೆ. ಇದನ್ನು ತಿಳಿದುಕೊಂಡ ಮನುಷ್ಯನು ಪಾಪಕ್ಕೆ ಅಧೀನನಾದವನಲ್ಲಾ ಎಂದೂ ತನ್ನಿಂದ ಪಾಪವನ್ನು ಅಧೀನಪಡಿಸಬಹುದೆಂದು ತಪ್ಪಾಗಿ ತಿಳಿದುಕೊಳ್ಳುತ್ತಾನೆ. ಈ ಕಾರಣದಿಂದ ಆ ಪಾಪವನ್ನು ಭಯವಿಲ್ಲದೆ ಮಾಡಲು ತೊಡಗುತ್ತಾನೆ. ಹಾಗೆ ಅವನು ಪಾಪ ಮಾಡಲು ತೊಡಗುತ್ತಾ ತೊಡಗುತ್ತಾ.. ಅದು ಬೆಳೆದು ಬಲಹೊಂದಿ ಅವನನ್ನು ತನ್ನ ಒಂದು ಅಧೀನಕ್ಕೆ ತರುತ್ತದೆ. ಅದರಿಂದ ಅವನು ಆಗ ಬಿಡುಗಡೆ ಹೊಂದಲು ಪ್ರಯತ್ನಿಸಿದರೂ ಅವನಿಗೆ ಅದು ಸಾಧ್ಯವಾಗುವದಿಲ್ಲ.

ಕೊನೆಗೆ ಹಾವಾಡಿಗನಿಗೆ ಉಂಟಾದ ಸ್ಥಿತಿಯಂತೆ ಪಾಪದ ಸಂಭಳ ಮರಣ; ಎಂಬ ಬಿರುದು ಅವನಿಗೆ ಸಿಗುತ್ತದೆ. ಇದನ್ನು ಓದುವ ಪ್ರೀತಿಯ ಸಹೋದರ ಸಹೋರಿಯರೆ ಚಿಕ್ಕ ಪಾಪತಾನೆ ಎಂದು ಅದಕ್ಕೆ ಸ್ಥಳ ನೀಡಿ ಇಂದಿಗೆ ಅದರಿಂದ ಬಿಡಿಸಿಕೊಳ್ಳಲಾಗದಂತೆ ಕಷ್ಟಪಡುತ್ತಿದ್ದೀರೋ? ಆ ಪಾಪದ ನಿಮಿತ ರೋಗ, ಚಿಂತೆ, ವೇದನೆ, ಕಣ್ಣೀರು ಇವಗಳಿಗೆ ಒಳಗಾಗುತ್ತಿದ್ದೀರೋ ನಿಮ್ಮನ್ನು ನೀವು ಬಿಡಿಸಿಕೊಳ್ಳಲು ಎಂದಿಗೂ ಸಾಧ್ಯವೇ ಇಲ್ಲ. ಆದರೆ ನಿಮ್ಮನ್ನು ಬಿಡಿಸಲು ಒಬ್ಬರಿದ್ದಾರೆ ಅವರಿಂದ ಮಾತ್ರ ಸಾಧ್ಯ. ಆತನೇ ಯೇಸುಕ್ರಿಸ್ತನು, ಆತನು ನಿಮ್ಮನ್ನು ಬಿಡಿಸಿದರೆ ಮಾತ್ರ ನೀವು ಬಿಡುಗಡೆಯನ್ನು ಹೊಂದಲು ಸಾಧ್ಯ.

ಎರಡು ಸಾವಿರ ವರ್ಷಗಳ ಹಿಂದೆ ಆತನು ನಮಗಾಗಿ ಈ ಲೋಕದಲ್ಲಿ ಮನುಷ್ಯವತಾರನಾಗಿ ಜನಿಸಿ ಬಂದನು. ನಮ್ಮ ಪಾಪಗಳನ್ನು ಶಿಲುಬೆಯಲ್ಲಿ ಹೊತ್ತು ರಕ್ತವನ್ನು ಸುರಿಸಿ ಕ್ರೂಜೆಯಲ್ಲಿ ಜೀವಬಿಟ್ಟನು. ಆತನನ್ನು ನಂಬಿ ನಮ್ಮ ಪಾಪಗಳನ್ನು ಆತನಲ್ಲಿ ಅರಿಕೆಮಾಡಿ ಪ್ರಾರ್ಥಿಸುವಾಗ, ಆತನು ನಮ್ಮನ್ನು ಅಧೀನಪಡಿಸಿರುವಂತ ಎಲ್ಲಾ ವಿಧವಾದ ಪಾಪಗಳಿಂದ ಬಿಡಿಸುವ ನು. ಅದು ಎಂತ ಒಂದು ಕಡು ಪಾಪವಾಗಿದ್ದರೂ ಯೇಸುವಿನ ರಕ್ತವು ಆ ಪಾಪದ ಬಂಧನದಿಂದ ಬಿಡಿಸಲು ಶಕ್ತವಾದದ್ದು.

ಇಂದಿಗೆ ಪಾಪಧೀನದಲ್ಲರಿವ ನೀವು ಯಾರಾಗಿದ್ದರೂ ಸರಿ. ಪಾಪದಿಂದ ಬಿಡಿಸುವ ಯೇಸು ಕ್ರಿಸ್ತನನ್ನು..ದೃಷ್ಟಿಸಿ ನೋಡಿರಿ ಆತನು ನಿಮ್ಮನ್ನು ಅಧೀನಪಡಿಸುವಂತ ಪಾಪದಿಂದ ನಿಶ್ಚಯವಾಗಿ ಬಿಡಿಸಿ ತನ್ನ ಒಂದು ಸಮಾಧಾನವನ್ನು ಶಾಂತಿಯನ್ನು ನೀಡುವನು.

ಯೋಹಾನ 8:36

ಮಗನು ಶಾಶ್ವತವಾಗಿ ಇರುವನು ಆದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು

1ಯೋಹಾನ 1:7

ಆತನು ಬೆಳಕಿನಲ್ಲಿರುವಂತೆಯೆ ನಾವು ಬೆಳಕಿನಲ್ಲಿ ನಡದರೆ ನಾವು ಒಬ್ಬರಸಂಗಡೊಬ್ಬರು ಅನ್ಯೂನ್ಯತೆಯಲ್ಲಿದ್ದೇವೆ ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ.

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ದೇ ಆದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಚಿಸಿ ಪುಸ್ತಕ ಮತ್ತು ಸಿ.ಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.

**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com

ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA